# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 27.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಪಿ ರಾಜಶೇಖರಯ್ಯ ಬಿನ್ ಲೇ. ಪುಟ್ಟರುದ್ರಯ್ಯ<br>52 ವರ್ಷ<br>ವ್ಯವಸಾಯ<br>ಪೆರಮಸಂದ್ರ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಮುಂದುವರೆದ ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀಮತಿ ಪಿ ಎಂ ಪಿ ರವರಿಂದ

ದಿಃ 07.02.2006 ರಂದು ವಾದಿ ಖರೀದಿ ಮಾಡಿದ್ದ ದಾವಾಸ್ವತ್ತನ್ನು ಹೊರತುಪಡಿಸಿ ನಾನು ಬೇರೆ 15 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ದಾವಾಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನ ಉತ್ತರಕ್ಕೆ ವಾದಿಗೆ ಮಾರಾಟ ಮಾಡಿದವರ ಉಳಿಕೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಉತ್ತರಕ್ಕೆ ಹೇಮಾವತಿ ನಾಲೆ ಇದೆ ಎಂದು ವಾದಿಯ ವೆಂಡಾರ್ ಕ್ರಯ ಪತ್ರದಲ್ಲಿ ಬರೆಸಿ ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಉತ್ತರಕ್ಕೆ ಯಾವುದೇ ಉಳಿಕೆ ಜಮೀನು ಇಲ್ಲದೇ ಇದ್ದರೂ ಕೂಡ ನಾನು ನನ್ನ ಕ್ರಯ ಪತ್ರದಲ್ಲಿ ಸುಳ್ಳು ಚಕ್ಕುಬಂದಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿಯ ಸ್ವಾಧೀನಕ್ಕೆ ನಾನು ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಡಿ.1 ದಾಖಲೆಯಲ್ಲಿ ನಾನು ಸುಳ್ಳು ಚಕ್ಕುಬಂದಿಯನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ಅನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ತೊಂದರೆ ಕೊಡಬೇಕೆಂದು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.